**ದಿನಾಂಕಃ 15/09/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಆರ್.ಡಿ.ಆರ್. ವಕೀಲರಿಂದಃ**

ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನಾನು ಹೇಳಿದ ಹಾಗೇ ನನ್ನ ತಂದೆ ಬರೆಸಿರುತ್ತಾರೆ. ದಾವಾ ಪತ್ರದ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸಾಕ್ಷಿಯು ಮುಂದುವರೆದ ದಾವಾ 2 ಮತ್ತು 3 ಅನ್ನು ನಾನು ಓದಿ ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಸರ್ವೆ ನಂಬರ್ 101/7 ಎ, 101/12, 101/65 ಕ್ಕೆ ಸಲ್ಲಿಸಿರುತ್ತಾರೆ. ದಾವಾ ಅನುಸೂಚಿ ಸರ್ವೆ ನಂಬರ್ 101/12 ನಮ್ಮ ಅಜ್ಜಿಯ ಸ್ವತ್ತು ಆಗಿರುತ್ತದೆ. ಅಂದರೆ ನನ್ನ ತಂದೆಯ ತಾಯಿಯ ಸ್ವತ್ತಾಗಿರುತ್ತದೆ. ನನ್ನ ಅಜ್ಜಿಗೆ ಸದರಿ ಸ್ವತ್ತು ಅವರ ತಾಯಿಯ ದಾನಪತ್ರದ ಮೂಲಕ ಬಂದಿರುತ್ತದೆ ಸದರಿ ದಾನ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾನ ಪತ್ರ ನೊಂದಣಿಯಾಗಿರುತ್ತದೆ.

ಸರ್ವೆ ನಂಬರ್ 101 ದುರಸ್ತು ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 101 ರಲ್ಲಿ ಎಷ್ಟು ಜಮೀನು ಇದೆ ಎಂದರೆ ನನ್ನ ಜಮೀನು ಬಿಟ್ಟು ಉಳಿದ ಎಷ್ಟು ಜಮೀನು ಇರುತ್ತದೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ವಾದಿಗೆ ಹೇಗೆ ಬಂದಿರುತ್ತದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಕೆಂಗೇಗೌಡನ ಮಗ ಸಿ.ಕೆ.ಚಂದ್ರಶೇಖರ ನನಗೆ ಗೊತ್ತು, ಅವನು ಸಂಬಂಧಿಕನಲ್ಲ. ಸದರಿ ಸಿ.ಕೆ. ಚಂದ್ರಶೇಖರ ವಾದಿಗೆ ಏನಾಗಬೇಕು ಎಂದು ನನಗೆ ಗೊತ್ತಿಲ್ಲ. ಸರ್ವೆ ಸ್ಕೆಚ್ ಗಳು ಯಾವಾಗಾ ಆಗಿದೆ ನನಗೆ ಗೊತ್ತಿಲ್ಲ. ಸರ್ವೆ ಸ್ಕೆಚ್ ಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಎ.ಸಿ. ನ್ಯಾಯಾಲಯದಲ್ಲಿ ಸರ್ವೆ ನಂಬರ್ 101/7 ಎಗೆ ಸಂಬಂಧಿಸಿದಂತೆ ಪ್ರಕರಣ ನಡೆದಿರುತ್ತದೆ. ಸರಿದ ಎ.ಸಿ. ನ್ಯಾಯಾಲಯದಲ್ಲಿ 33 ಗುಂಟೆ ಮತ್ತು 34 ಗುಂಟೆಗೆ ಸಂಬಂಧಿಸಿದಂತೆ ಪ್ರಕರಣವು ನಡೆದಿರುತ್ತದೆ. ನನ್ನ ತಂದೆ ಹೆಸರು ರಾಜೇಗೌಡ. ನನ್ನ ಚಿಕ್ಕಪ್ಪನ ಹೆಸರು ಕೃಷ್ಣೇಗೌಡ. ಸದರಿ ಉಪವಿಭಾಗದಿಕಾರಿಗಳ ನ್ಯಾಯಾಲಯಕ್ಕೆ ಸಿದ್ದರಾಮೇಗೌಡರವರು ಪ್ರಕರಣವನ್ನು ಸಲ್ಲಿಸಿದರು. ಅವರು ರಾಜೇಗೌಡ, ಕೃಷ್ಣೇಗೌಡ ಮತ್ತು ಮಾಯಣ್ಣಗೌಡರವರ ವಿರುದ್ದ ಸಲ್ಲಿಸಿದ್ದರು.

ಯಾವ ಸರ್ವೆ ನಂಬರ್ ನ ಜಮೀನುಗಳು ಯಾವಾಗ, ಭೂ ಸ್ವಾದೀನವಾಗಿದೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 101 ರಲ್ಲಿ ಎಷ್ಟು ವಿಸ್ತೀರ್ಣದ ಜಮೀನುಗಳು ಭೂ ಸ್ವಾದೀನವಾಗಿದೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನನ್ನ ಪ್ರಮಾಣಪತ್ರಿಕೆಯಲ್ಲಿ ಬರೆಸಿಲ್ಲ. ಯಾವ ಉದ್ದೇಶಕ್ಕಾಗಿ ಭೂಸ್ವಾದೀನವಾಗಿದೆ ನನಗೆ ಗೊತ್ತಿಲ್ಲ. ಜಮೀನಿನ ಪೂರ್ವಕ್ಕೆ ಭೂ ಸ್ವಾದೀನವಾಗಿರುತ್ತದೆ. ಮಾಯಣ್ಣರವರಿಗೆ ಯಾವಾ ಯಾವಾ ಸರ್ವೆ ನಂಬರ್ ಗಳಲ್ಲಿ, ಎಷ್ಟೇಷ್ಟು ವಿಸ್ತೀರ್ಣದ ಜಮೀನು ಬಂದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಿಕೆಯಲ್ಲಿ ಅವರಿಗೆ ಎಷ್ಟೇಷ್ಟು ವಿಸ್ತೀರ್ಣದ ಜಮೀನು ಬಂದಿದೆ ಎಂದು ಹೇಳಿರುವುದಿಲ್ಲ. ನನ್ನ ತಂದೆ, ಕೃಷ್ಣೇಗೌಡ ಮತ್ತು

ಮಾಯಣ್ಣರವರು ಜಮೀನನ್ನು ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಪಾಲುಪಟ್ಟಿ ಯಾವಾಗಾ ಆಗಿದೆ ಎಂದು ನನಗೆ ಗೊತ್ತಿಲ್ಲ. ಪಾಲುಪಟ್ಟಿಯು ಎಷ್ಟು ವರ್ಷದ ಹಿಂದೆ ಆಗಿದೆ ನನಗೆ ಗೊತ್ತಿಲ್ಲ. ಸದರಿ ಪಾಲುಪಟ್ಟಿಯಲ್ಲಿ ಯಾರ್ಯಾರಿಗೆ ಎಷ್ಟೇಷ್ಟು ವಿಸ್ತೀರ್ಣದ ಜಮೀನು, ಚೆಕ್ಕುಬಂಧಿ ಬರೆದಿರುತ್ತಾರೆ ಎಂದರೆ ಸರಿ.

ನನ್ನ ತಂದೆಗೆ ಸರ್ವೆ ನಂಬರ್ 101/7 ಎ ರಲ್ಲಿ 34 ಗುಂಟೆ ಜಮೀನು ಬಂದಿರುತ್ತದೆ. ಸದರಿ ಜಮೀನು ಬಿಟ್ಟರೆ ನನ್ನ ತಂದೆಗೆ ನಮ್ಮ ಊರಿನಲ್ಲಿ ಬೇರೆ ಜಮೀನು ಹಿಸ್ಸೆಯ ಮೂಲಕ ಬಂದಿರುವುದಿಲ್ಲ. ನಮ್ಮ ಕುಟುಂಬದ ಪಾಲುಪಟ್ಟಿಯನ್ನು ನ್ಯಾಯಲಾಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಚಿಕ್ಕಪ್ಪ ಕೃಷ್ಣೇಗೌಡರವರಿಗೆ ಸರ್ವೆ ನಂಬರ್ 101/7 ಎ ರಲ್ಲಿ ಹಿಸ್ಸೆ ಬಂದಿರುತ್ತದೆ. ಅವರಿಗೂ ಸಹ ಸದರಿ ಸರ್ವೆ ನಂಬರ್ ಜಮೀನು ಹೊರತುಪಡಿಸಿ ಬೇರೆ ಜಮೀನು ಇಲ್ಲ.

ಮರಗಳನ್ನು 3 ತಿಂಗಳ ಹಿಂದೆ ಮಾರಿರುತ್ತೇವೆ. ಸದರಿ ಮರಗಳನ್ನು ಹೊಳೆನರಸೀಪುರದಲ್ಲಿ ಇರುವ ವ್ಯಾಪರಗಾರರಿಗೆ ಮಾಡಿರುತ್ತೇನೆ. ಸದರಿ ಮರಗಳನ್ನು 10 ಸಾವಿರ ರೂ.ಗಳಿಗೆ ಮಾರಾಟ ಮಾಡಿರುತ್ತೇವೆ. ಸದರಿ ಮರಗಳು ನಮ್ಮ ಜಮೀನಿನ ಮರಗಳಾಗಿರುತ್ತವೆ. ಸಾಕ್ಷಿಗೆ 2 ಛಾಯಚಿತ್ರಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು, ಸದರಿ ಛಾಯಚಿತ್ರಗಳನ್ನು ನಿಪಿ30 ಮತ್ತು ನಿಪಿ31 ಎಂದು, ಸಿ.ಡಿ.ಯನ್ನು ನಿಪಿ31(ಎ) ಎಂದು ಗುರುತಿಸಲಾಯಿತು. ಸದರಿ ಮರಗಳು ನಮ್ಮ ಜಮೀನು ಇರುವುದಕ್ಕೆ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ. ಸದರಿ ಮರಗಳನ್ನು ಕಡಿಯುವ ಸಂದರ್ಭದಲ್ಲಿ ದೂರು ದಾಖಲಾಗಿತ್ತು ಎಂದರೆ ಸರಿ. ಪೋಲೀಸರು ಸ್ಥಳಕ್ಕೆ ಬಂದಿರಲಿಲ್ಲ. ಸದರಿ ಘಟನೆ ಮತ್ತು ಪೋಲೀಸ್ ದೂರು ದಾಖಲಾಗಿ 6 ವರ್ಷ ಆಗಿದೆ ಎಂದರೆ ಸರಿಯಲ್ಲ, ನಾನು ಮರಗಳನ್ನು ಮಾರಿ ಸುಮಾರು 3 ತಿಂಗಳು ಆಗಿದೆ. ನಾಗರಾಜುರವರು ಜಮೀನಿಗೆ ಸಂಬಂಧಿಸಿದ ಮರಗಳನ್ನು ನಾನು ಕಡಿದಿರುವ ಸಂದರ್ಭದಲ್ಲಿ ಪೋಲೀಸ್ ದೂರು ದಾಖಲಾಗಿತ್ತು ಎಂದರೆ ನಾನು ಅವರ ಜಮೀನಿನ ಮರಗಳನ್ನು ಕಡಿದಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಪೋಲೀಸರು ಸ್ಥಳಕ್ಕೆ ಬಂದು ಮರಗಳನ್ನು ಸಾಗಾಣಿ ಮಾಡಬಾರದು ಎಂದು ನಮಗೆ ಹೇಳಿದ್ದರೂ ಎಂದರೂ ಸಹ ನಾವು ಮರಗಳನ್ನು ಸಾಗಣಿಕೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮರಗಳನ್ನು ಕಡಿಯಲು ಮತ್ತು ಮಾರಾಟ ಮಾಡಲು ಅರಣ್ಯ ಇಲಾಖೆಯಿಂದ ನಾವು ಯಾವುದೇ ಲೈಸನ್ಸ್ ಪಡೆದುಕೊಂಡಿರುವುದಿಲ್ಲ.

ಸಾಕ್ಷಿಗೆ ನಿಪಿ23 ಮತ್ತು ನಿಪಿ24 ರಲ್ಲಿ ಕಾಣುವ 2 ಜಮೀನುಗಳು ನನಗೆ ಸಂಬಂಧಿಸಿದೆ. ಸದರಿ ಜಮೀನುಗಳನ್ನು ನ್ಯಾಯಾಲಯದ ಕಮೀಷನರ್ ಮೂಲಕ ಅಳತೆ ಮಾಡಿಸಿಕೊಳ್ಳಲು ನನ್ನ ತಕರಾರು ಇರುವುದಿಲ್ಲ. ಸರ್ವೆ ನಂಬರ್ 101/7 ಎ ರಲ್ಲಿ ನನ್ನ ಅಜ್ಜಿಗೆ ಎಷ್ಟು ವಿಸ್ತೀರ್ಣದ ಜಮೀನು ಬಂದಿತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ಅಜ್ಜಿಗೆ ಜಮೀನು ಬಂದಂತಹ ಸಂದರ್ಭದಲ್ಲಿ ಚೆಕ್ಕುಬಂಧಿ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ